ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

DR. MANMOHAN SINGH
BENGALURU CITY UNIVERSITY

ಆಗು ನೀ ಅನಿಕೇತನ
BE BOUNDLESS

ಕುಲಸಚಿವರ (ಆಡಳಿತ) ಕಚೇರಿ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560001
ದೂ.ಸಂ.: 080-22961016/22131385 ಇ-ಮೇಲ್ ಐಡಿ: registrar@bcu.ac.in / registrarbcu@gmail.com

**ಸಂ:** ಡಾ.ಮಸಿಂಬೆಂನವಿ/ಶೈಕ್ಷಣಿಕ/ಸ್ನಾತಕ ಪ್ರವೇಶಾತಿ/2026-27 **ದಿನಾಂಕ:** 09.07.2026

# ಅಧಿಸೂಚನೆ

**ವಿಷಯ:** 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕ ಕೋರ್ಸ್‌ಗಳ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುಎನ್ಇ 2024, ಬೆಂ, ದಿ: 07.11.2025
2. ಈ ಕಚೇರಿಯ ಅಧಿಸೂಚನೆ ಸಂ: Dr.MSBCU/ACA/UG Calendar of Events/2026-27 ದಿನಾಂಕ: 30.06.2026
3. ವಿವಿಧ ಕಾಲೇಜು ಪ್ರಾಂಶುಪಾಲರುಗಳ ಪತ್ರಗಳು.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.07.2026

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿಯನ್ನು ಉಲ್ಲೇಖ (2)ರ ಶೈಕ್ಷಣಿಕ ವೇಳಾಪಟ್ಟಿಯನ್ವಯ 07.07.2026ರವರೆಗೆ ದಂಡ ಶುಲ್ಕವಿಲ್ಲದೆ ನಡೆಸಲು ನಿಗದಿಪಡಿಸಲಾಗಿತ್ತು.

ಆದರೆ, ಪ್ರಸ್ತುತ ಹಲವು ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಂಶುಪಾಲರು ಪ್ರವೇಶಾತಿ ದಿನಾಂಕವನ್ನು ಮತ್ತಷ್ಟು ವಿಸ್ತರಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಅಲ್ಲದೆ, UUCMS ಪೋರ್ಟಲ್‌ನಲ್ಲಿ ಉಂಟಾಗಿರುವ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಹಾಗೂ ಕಾಲೇಜುಗಳ ಮನವಿಗಳನ್ನು ಪರಿಗಣಿಸಿ, ಮಾನ್ಯ ಕುಲಪತಿಗಳ ಅನುಮೋದನೆಯ ಮೇರೆಗೆ **ಪ್ರಥಮ ವರ್ಷದ ಸ್ನಾತಕ ಕೋರ್ಸುಗಳ ಪ್ರವೇಶಾತಿ ದಿನಾಂಕವನ್ನು ದಂಡ ಶುಲ್ಕವಿಲ್ಲದೆ 15.07.2026ರವರೆಗೆ ಅಂತಿಮವಾಗಿ ವಿಸ್ತರಿಸಲಾಗಿದೆ.**

ಹಾಗೆಯೇ, **2026-27ನೇ ಶೈಕ್ಷಣಿಕ ಸಾಲಿನ ದ್ವಿತೀಯ, ತೃತೀಯ ಹಾಗೂ ಚತುರ್ಥ ವರ್ಷದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು UUCMS ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಪಾವತಿಸಲು 31.07.2026ರವರೆಗೆ ಅವಕಾಶ ಕಲ್ಪಿಸಲಾಗಿದೆ.**

ಆದ್ದರಿಂದ, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು **ಹಿಂದಿನ ಸೆಮಿಸ್ಟರ್‌ನ ಪರೀಕ್ಷಾ ಶುಲ್ಕವನ್ನು ಪಾವತಿಸಿರುವ ಅರ್ಹ ವಿದ್ಯಾರ್ಥಿಗಳಿಗೆ UUCMS ಪೋರ್ಟಲ್‌ನಲ್ಲಿ ಸಮ (Even) ಸೆಮಿಸ್ಟರ್‌ನಿಂದ ಬೆಸ (Odd) ಸೆಮಿಸ್ಟರ್‌ಗೆ Promotion ಪ್ರಕ್ರಿಯೆಯನ್ನು ಪೂರ್ಣಗೊಳಿಸಿ,** ನಂತರ ಪ್ರವೇಶಾತಿ ಪ್ರಕ್ರಿಯೆಯನ್ನು ನಿಗದಿತ ಅವಧಿಯೊಳಗೆ ಮುಕ್ತಾಯಗೊಳಿಸುವಂತೆ ಸೂಚಿಸಲಾಗಿದೆ.

ಉಲ್ಲೇಖ (2)ರ ಅಧಿಸೂಚನೆಯಲ್ಲಿ ತಿಳಿಸಿರುವಂತೆ **ಪ್ರಥಮ ವರ್ಷದ ಸ್ನಾತಕ ಪದವಿ ತರಗತಿಗಳು ಈಗಾಗಲೇ ನಿಗದಿಪಡಿಸಿರುವ ವೇಳಾಪಟ್ಟಿಯಂತೆಯೇ ನಡೆಯಲಿವೆ.**

**ಕುಲಸಚಿವರು**

**ಇವರಿಗೆ,**
1. ಪ್ರಾಂಶುಪಾಲರು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳು.

**ಪ್ರತಿ,**
1. ಎಲ್ಲಾ ನಿಕಾಯಗಳ ಡೀನರುಗಳಿಗೆ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ.
2. ಸಂಬಂಧಿತ ವಿಭಾಗಗಳಿಗೆ.
3. UUCMS ನೋಡಲ್ ಅಧಿಕಾರಿ (ದಿನಾಂಕ ವಿಸ್ತರಣೆ ಮಾಡಲು)
4. ಕಛೇರಿ ಪ್ರತಿ.